ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು-560 001
ದೂರವಾಣಿ ಸಂಖ್ಯೆ:080-22342161, E-mail:karnregs@gmail.com

ಸಂ: ಗ್ರಾಅಪ 34/2 ಉಖಾಯೋ 2020 ದಿನಾಂಕ: 20.07.2020

**ಇವರಿಗೆ,**
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ

**ಮಾನ್ಯರೇ,**

ವಿಷಯ: ಜಿಲ್ಲಾ ಪಂಚಾಯಿತಿ ಮಟ್ಟದಲ್ಲಿ "MGNREGA Accounts Manager" ಗಳ ನೇಮಕಾತಿ ಮಾಡಿಕೊಳ್ಳುವ ಕುರಿತು..

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ನರೇಗಾ) ಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಸಂಬಂಧಿಸಿದ ಶಾಸನಬದ್ಧ ಬಾಧ್ಯತೆ (Statutory obligation) ಗಳಾದ ಆದಾಯ ತೆರಿಗೆ ಪಾವತಿ, ಸರಕು ಮತ್ತು ಸೇವಾ ತೆರಿಗೆ ಪಾವತಿ, ರಾಜಧನ ಕಟಾವಣೆ ಮತ್ತು ಪಾವತಿ, ವಾರ್ಷಿಕ ಲೆಕ್ಕಪತ್ರಗಳ ತಯಾರಿಕೆ ಹಾಗೂ ನಿರ್ವಹಣೆ, ಹಣಕಾಸಿನ ವಿಷಯಕ್ಕೆ ಸಂಬಂಧಿಸಿದಂತೆ ವಿವಿಧ ಬ್ಯಾಂಕ್‌ಗಳ ಜೊತೆಗೆ ಸಮನ್ವಯ ಸಾಧಿಸುವುದು ಹಾಗೂ ಇನ್ನಿತರ ಲೆಕ್ಕಪತ್ರ ಕಾರ್ಯಗಳನ್ನು ನಿರ್ವಹಿಸಲು ಹಾಗೂ ಗ್ರಾಮ ಪಂಚಾಯಿತಿಗಳಿಗೆ ಈ ಮೇಲಿನ ವಿಷಯದಲ್ಲಿ ಸಹಕರಿಸಲು ಲೆಕ್ಕಪತ್ರ ವಿಷಯದಲ್ಲಿ ನುರಿತರಾದ ಅಭ್ಯರ್ಥಿಗಳನ್ನು "Accounts Manager" ಆಗಿ ಪ್ರತಿ ಜಿಲ್ಲಾ ಪಂಚಾಯಿತಿಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಈ ಮೂಲಕ ಸೂಚಿಸಿದೆ.

ಸಾಮಾನ್ಯ ಅರ್ಹತೆ:-
1) M.Com/MBA Finance ವಿಷಯದಲ್ಲಿ ಸ್ನಾತಕೋತ್ತರ ಪದವಿ ಹೊಂದಿರಬೇಕು.
2) ವಯಸ್ಸು 35 ವರ್ಷ ಮೀರಿರಬಾರದು.
3) ಕನಿಷ್ಠ 2 ವರ್ಷಗಳ ಸಂಬಂಧಿತ ಅನುಭವ ಹೊಂದಿರಬೇಕು.

ವೇತನ:- ಮಾಸಿಕ ಸಂಭಾವನೆ (Gross) ರೂ.30,000/- + ಪ್ರಯಾಣಭತ್ಯೆ

ಕರ್ತವ್ಯಗಳು:-
1) ನರೇಗಾ ಯೋಜನೆಗೆ ಸಂಬಂಧಿಸಿದ ಶಾಸನಬದ್ಧ ಕಟಾವಣೆಗಳಾದ ಸರಕು ಮತ್ತು ಸೇವಾ ತೆರಿಗೆ, ಟಿಡಿಎಸ್, ರಾಜಧನ ಕಟಾವಣೆ ಮತ್ತು ಪಾವತಿಗಳಲ್ಲಿ ಗ್ರಾಮ ಪಂಚಾಯಿತಿಗಳಿಗೆ ಸಹಕರಿಸುವುದು.
2) ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳ ಲೆಕ್ಕಪತ್ರಗಳ ತಯಾರಿಕೆ ಮತ್ತು ನಿರ್ವಹಣೆ.
3) ಉದ್ಯೋಗ ಚೀಟಿಯೊಂದಿಗೆ ಆಧಾರ್ ಕಾರ್ಡ್ ದಾಖಲಾತಿ ಜೋಡಣೆ ಮೇಲು ಉಸ್ತುವಾರಿ ವಹಿಸುವುದು.
4) ನರೇಗಾ ಯೋಜನೆಗೆ ಸಂಬಂಧಿಸಿದಂತೆ ವಿವಿಧ ಬ್ಯಾಂಕ್‌ಗಳ ಜೊತೆ ಸಮನ್ವಯ ಸಾಧಿಸುವುದು.
5) DPC ಮತ್ತು ADPC ಗಳಿಗೆ ಸಹಕರಿಸುವುದು.
6) ನರೇಗಾ ಯೋಜನೆಗೆ ಸಂಬಂಧಿಸಿದಂತೆ ಇನ್ನಿತರ ಲೆಕ್ಕಪತ್ರ ಹಾಗೂ ಶಾಸನಬದ್ಧ ಬಾಧ್ಯತೆ (Statutory obligation) ಗಳನ್ನು ನಿರ್ವಹಿಸುವುದು.

**ನೇಮಕಾತಿ ವಿಧಾನ:**

1) ಜಿಲ್ಲಾ ಪಂಚಾಯಿತಿ ಮಟ್ಟದಲ್ಲಿ ಮಾನವ ಸಂಪನ್ಮೂಲ ಸಂಸ್ಥೆಯ ಮೂಲಕ ಅರ್ಜಿ ಆಹ್ವಾನಿಸುವುದು.
2) ಅರ್ಹ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು NIC ಯಿಂದ ಜಿಲ್ಲಾ ವೆಬ್‌ಸೈಟ್ ಮೂಲಕ ಅರ್ಜಿಗಳನ್ನು ಪಡೆಯುವುದು.
3) ಅಭ್ಯರ್ಥಿಗಳ ಸಂದರ್ಶನ (Interview) ಇರುವುದಿಲ್ಲ.
4) ಹುದ್ದೆಗೆ ನಿಗಧಿಪಡಿಸಿದ ವಿಷಯದ ಸ್ನಾತಕೋತ್ತರ ಪದವಿಗೆ – **50** ಅಂಕಗಳು (ಉದಾಹರಣೆಗೆ ಸ್ನಾತಕೋತರ ಪದವಿಯಲ್ಲಿ ಶೇಕಡ 70 ಅಂಕಗಳನ್ನು ಪಡೆದಿದ್ದಲ್ಲಿ ಆ ಅಭ್ಯರ್ಥಿಗೆ 70 X 0.50=35 ಅಂಕಗಳನ್ನು ನೀಡುವುದು.)

**ಸೂಚನೆ:** ಒಂದು ವೇಳೆ ಅಭ್ಯರ್ಥಿಯು ಸಿ.ಜಿ.ಪಿ.ಎ.( cumulative grade point average) ರೀತ್ಯಾ ಅಂಕಗಳನ್ನು ಪಡೆದಿದ್ದಲ್ಲಿ, ಉದಾಹರಣೆಗೆ 10 ಅಂಕಗಳಿಗೆ 9 ಅಂಕ ಪಡೆದಿದ್ದಲ್ಲಿ, ಅದನ್ನು 90% ಎಂದು ಪರಿಗಣಿಸುವುದು.

5) ಸಂಬಂಧಿಸಿದ ಕಾರ್ಯ ಕ್ಷೇತ್ರದಲ್ಲಿ 2 ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಕಾರ್ಯಾನುಭವಕ್ಕಾಗಿ (Experience)–**30** ಅಂಕಗಳು
   a) 2 ವರ್ಷ ಅನುಭವ ಹೊಂದಿರುವವರಿಗೆ 20 ಅಂಕಗಳು.
   b) 2 ರಿಂದ 3 ವರ್ಷಗಳ ಅನುಭವ ಹೊಂದಿರುವವರಿಗೆ 25 ಅಂಕಗಳು.
   c) 3 ವರ್ಷಗಳಿಗೆ ಮೇಲ್ಪಟ್ಟ ಅನುಭವ ಹೊಂದಿರುವವರಿಗೆ 30 ಅಂಕಗಳು.
6) Tally 9.0 ಮಾಡಿದ್ದು, ಪ್ರಮಾಣಪತ್ರವನ್ನು ಹೊಂದಿರುವವರಿಗೆ 5 ಅಂಕಗಳು.
7) GST Filing ಪ್ರಮಾಣಪತ್ರವನ್ನು ಹೊಂದಿರುವವರಿಗೆ **5** ಅಂಕಗಳು.
8) Articleship ಪ್ರಮಾಣಪತ್ರವನ್ನು ಹೊಂದಿರುವವರಿಗೆ **10** ಅಂಕಗಳು.
   ಒಟ್ಟು ಅಂಕಗಳು **100** ಅಂಕಗಳು.

**ಉದಾಹರಣೆ:**– **X** ಅಭ್ಯರ್ಥಿಯು ಸ್ನಾತಕೋತರ ಪದವಿಯಲ್ಲಿ ಶೇಕಡ 70 ಅಂಕಗಳನ್ನು ಪಡೆದಿದ್ದು, 4 ವರ್ಷಗಳ ಸಂಬಂಧಿತ ಅನುಭವವನ್ನು ಹೊಂದಿರುತ್ತಾನೆ ಹಾಗೂ Tally 9.0 ಪ್ರಮಾಣಪತ್ರವನ್ನು ಹೊಂದಿರುತ್ತಾರೆ. ಆ ಅಭ್ಯರ್ಥಿಯು ಗಳಿಸಿದ ಅಂಕಗಳು ಈ ಕೆಳಗಿನಂತಿದೆ.

| | |
|---|---|
| ಸ್ನಾತಕೋತರ ಪದವಿ 70 X 0.50 | =35 |
| ಅನುಭವ (4ವರ್ಷಗಳು) | =30 |
| ಒಟ್ಟು ಅಂಕಗಳು | =65 |

**ನೇಮಕಾತಿ ವೇಳಾಪಟ್ಟಿ:**–

| | |
|---|---|
| ಪ್ರಕಟಣೆ ದಿನಾಂಕ | 27.07.2020 |
| ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 10.08.2020 |
| ಆಯ್ಕೆ ಮಾಡಿಕೊಳ್ಳಲು ಕೊನೆಯ ದಿನಾಂಕ | 15.08.2020 |

ತಮ್ಮ ವಿಶ್ವಾಸಿ,

20.07

ಆಯುಕ್ತರು ಗ್ರಾಮೀಣಾಭಿವೃದ್ಧಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪ್ರತಿಯನ್ನು:–
1) ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಲೆಕ್ಕಾಧಿಕಾರಿಗಳಿಗೆ.
2) ಕಛೇರಿ ಪ್ರತಿ.